PW- 06

CW-11

ದಿನಾಂಕ**: 22.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಎಸ್ ಆರ್ ಹೆಚ್ ಆರೋಪಿ ಪರ ವಕೀಲರಿಂದಃ

1. ಮೃತ ಶಾಂತವ್ವಳಿಗೆ ನಾವು 4 ಗಂಡು ಮಕ್ಕಳು ಎಂದರೆ ಸರಿ. ನಾವು ವಾಸಿಸುವ ಮನೆ ಮೃತ ಶಾಂತವ್ವ ವಾಸಿಸುವ ಮನೆಯಿಂದ 1 ಕಿಮಿ ಅಂತರದಲ್ಲಿದೆ. ನಾವು ಮೃತ ಶಾಂತವ್ವಳ ಜೊತೆ ಹೊಂದಾಣಿಕೆ ಇರದ ಕಾರಣ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ನಾವು 4 ಜನ ಗಂಡು ಮಕ್ಕಳಾರೂ ಮೃತ ಶಾಂತವ್ವಳ ಮನೆಗೆ ಹೋಗಿ ಬಂದು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ಶಾಂತವ್ವ ಆಗು - ಹೋಗುಗಳನ್ನು ನಾವು 4 ಜನ ಅಣ್ಣತಮ್ಮಂದಿರು ನೋಡಿಕೊಳ್ಳುತ್ತಿದ್ದೆವು. ಮೃತ ಶಾಂತವ್ವಳನ್ನು ಕೊಲೆ ಮಾಡಿದ ಬಗ್ಗ ನಾವು 4 ಗಂಡು ಮಕ್ಕಳಿಗೆ ದೂರನ್ನು ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ.

2. ಮೃತ ಶಾಂತವ್ವ ಕೊಲೆಯಾದ ಬಗ್ಗ ದಿಃ17.08.2019 ರಂದು ಮುಂಜಾನೆ 8.30 ಗಂಟೆಗೆ ನನಗೆ ಪ್ರಾಸಾ-3 ಮಧುಕೇಶ ಇವರು ತಿಳಿಸಿರುತ್ತಾರೆ. ನಾನು ತಕ್ಷಣವೇ ನನ್ನ ತಾಯಿ ಮನೆಗೆ ವಾಹನದಲ್ಲಿ ತೆರಳಿರುತ್ತೇನೆ. ನಾನು ಸದರಿ ಮನೆಗೆ ಹೋದಾಗ ಹೊರಗಡೆ ಬಹಳ ಜನ ಸೇರಿದ್ದರು. ನಾನು ಮನೆಯ ಒಳಗಡೆ ಹೋದಾಗ ನನ್ನ ಮೃತ ತಾಯಿಯ ಶವ ಮಾತ್ರ ಇತ್ತು ಅಲ್ಲಿ ಬೇರೆ ಯಾರು ಇರಲಿಲ್ಲ. ಪ್ರಾಸಾ-3 ಮದುಕೇಶ ಹೊರಗಡೆ ಇದ್ದು , ನನ್ನ ಸೋದರಮಾವನಿಗೆ ಕರೆ ಮಾಡುತ್ತಿದ್ದರು. ನನಗೆ ಕರೆ ಮಾಡಿದಾಗ ಪ್ರಾಸಾ-3 ಮದುಕೇಶ ಯಾರೊ ನನ್ನ ತಾಯಿಯನ್ನು ಕೊಲೆ ಮಾಡಿರುತ್ತಾರೆ ಅಂತಾ ಹೇಳಿದರು. ನಾನು ಪೋಲಿಸರ ಮುಂದೆ ನಮ್ಮ ತಾಯಿ ಹೃದಯಾಘಾತದಿಂದ ಮರಣ ಹೊಂದಿರುತ್ತಾರೆಂದು ಹೇಳಿಕೆ ಕೊಟ್ಟಿಲ್ಲ.

3. ಮೃತ ನನ್ನ ತಾಯಿ ವಾಸ ಮಾಡುತ್ತಿದ್ದ ಮನೆ ಮಾರುಕಟ್ಟೆಯಲ್ಲಿ ಇದೆ ಎಂದರೆ ಸರಿ. ಅಲ್ಲಿ ಸಾಕಷ್ಟು ಜನ ಓಡಾಡುತ್ತಿರುತ್ತಾರೆ ಎಂದರೆ ಸರಿ. ಮೃತ ನನ್ನ ತಾಯಿ ವಾಸ ಮಾಡುತ್ತಿದ್ದ ಮನೆಯ ರಸ್ತೆಯಲ್ಲಿ ಎರಡು ಎಟಿಎಮ್ ಗಳು ಹಾಗೂ ಒಂದು ಬ್ಯಾಂಕ್ ಇದೆ ಎಂದರೆ ಸರಿಯಲ್ಲ. ಅಲ್ಲಿ ಎರಡು ಎಟಿಎಮ್ ಗಳು ಹಾಗೂ ಒಂದು ಬ್ಯಾಂಕ್ ಇದ್ದರೂ ಸಹ ನಾನು ಉದ್ದೇಶಪೂರ್ವಕವಾಗಿ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನನ್ನ ಮೃತ ತಾಯಿಯನ್ನು ಯಾರು ಕೊಲೆ ಮಾಡಿದರು ಎಂದು ಮಾರನೇಯ ದಿನ ಪೋಲಿಸರು ಹೇಳಿದ ಮೇಲೆ ಗೊತ್ತಾಯಿತು. ದಿಃ 17.08.2019 ರಂದು ಪೋಲಿಸರು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನನ್ನನ್ನು ವಿಚಾರಿಸಿಲ್ಲ. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ನನಗೆ ಯಾವತ್ತು ಪೋಲಿಸರು ವಿಚಾರಿಸಿಲ್ಲ.

5. ನನ್ನ ಮೃತ ತಾಯಿ ಮನೆಗೆ ಘಟನೆಯಾದ ದಿನ ಹೋದಾಗ ನನಗೆ ಭಯ ಆಯಿತು. ನನ್ನ ಮೃತ ತಾಯಿ ಶವವನ್ನು ನೋಡಿದಾಗ , ನನಗೆ ಅವರನ್ನು ಕೊಲೆ ಮಾಡಲಾಗಿದೆ ಅನಿಸಿತು. ನಾನು ತಕ್ಷಣ ಪೋಲಿಸರಿಗೆ ನನ್ನ ತಾಯಿ ಕೊಲೆ ಮಾಡಲಾಗಿದೆ ಎಂದು ವಿಷಯ ತಿಳಿಸಿಲ್ಲ. ನನ್ನ ಬಳಿ ಆ ಸಮಯದಲ್ಲಿ ಮೊಬೈಲ ಇತ್ತು ಎಂದರೆ ಸರಿ.

6. ನನ್ನ ಮೃತ ತಾಯಿ ಮನೆಯಿಂದ ಪೊಲಿಸ ಠಾಣೆ 1 ಕಿಮಿ ಅಂತರದಲ್ಲಿದೆ. ನಾನು ನಮ್ಮ ಮೃತ ತಾಯಿಯ ಮನೆಗೆ ದ್ವಿಚಕ್ರ ವಾಹನದ ಮೇಲೇ ಹೋಗಿರುತ್ತೇನೆ. ನನ್ನ ಮೃತ ತಾಯಿ ವಾಸಿಸುವ ಮನೆ ಹಾಗೂ ಜಮೀನು ನನ್ನ ಮೃತ ತಾಯಿ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮನೆ ಮಾತ್ರ ತಾಯಿ ಹೆಸರಿನಲ್ಲಿದೆ ಎಂದು ಹೇಳುತ್ತಾರೆ. ನನ್ನ ಮೃತ ತಾಯಿ ಹೆಸರಿನಲ್ಲಿ ಜಮೀನು ಹಾಗೂ ಮನೆ ಇದ್ದು ಅದನ್ನು ನಮ್ಮ ಮದ್ಯೆ ಭಾಗ ಮಾಡಿಸು ಎಂದು ನಾವು 4 ಜನ ಸಹೋದರರು ನನ್ನ ಮೃತ ತಾಯಿ ಜೊತೆ ಜಗಳ ಮಾಡುತ್ತಿದ್ದೆವು ಎಂದರೆ ಸರಿಯಲ್ಲ.

7. ನನ್ನ ಮೃತ ತಾಯಿ ಹತ್ತಿರ ಸಾಕಷ್ಟು ಬಂಗಾರ ಇತ್ತು ಎಂದರೆ ಸರಿ. ನನ್ನ ಮೃತ ತಾಯಿ ಬಳಿ ಇದ್ದ ಬಂಗಾರದ ವಿಷಯವಾಗಿ ನಮಗೂ ಅವರಿಗೂ ಜಗಳವಿದ್ದು, ಸದರಿ ಜಗಳದಲ್ಲಿ ಪ್ರಾಸಾ-2 ರಾಮನಾಥ ಇವರು ಪಂಚಾಯಿತಿ ಮಾಡಿದ್ದರು ಎಂದರೆ ಸರಿಯಲ್ಲ. ಈ ಎಲ್ಲ ಕಾರಣದಿಂದ ನಮ್ಮ ಹಾಗೂ ನನ್ನ ಮೃತ ತಾಯಿ ಮದ್ಯೆ ಮನಸ್ತಾಪ ಇತ್ತು ಎಂದರೆ ಸರಿಯಲ್ಲ.

8. ಆರೋಪಿ ನನ್ನ ಚಿಕ್ಕಪ್ಪ ಎಂದರೆ ಸರಿ. ಆರೋಪಿ ನಮಗೆ ನಿಮ್ಮ ತಾಯಿ ಜೊತೆ ಆಸ್ತಿಗಾಗಿ ಜಗಳ ಮಾಡಬೇಡಿ , ಅವರು ಇರುವಷ್ಟು ದಿನ ಅವರ ಹೆಸರಿನಲ್ಲಿರಲೀ ಎಂದು ಬುದ್ದಿಮಾತು ಹೇಳಿದ್ದರು ಎಂದರೆ ಸರಿಯಲ್ಲ. ಆಸ್ತಿಯ ವಿಷಯವಾಗಿ ನಮ್ಮ ತಾಯಿ ಜೊತೆ ಜಗಳ ಮಾಡಿ ನಾವು 4 ಸಹೋದರರು ನಮ್ಮ ತಾಯಿಯನ್ನು ಕೊಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮೃತ ತಾಯಿಯ ಮಂಚದ ಪಕ್ಕದಲ್ಲಿರುವ ದಿಂಬಿಗೆ ನನ್ನ ಹಾಗೂ ನನ್ನ ಸೋದರರ ರಕ್ತ ಹತ್ತಿತ್ತು ಎಂದರೆ ಸರಿಯಲ್ಲ.

9. ದಿಃ 25.10.2024 ರಂದು ನಾನು ಈ ನ್ಯಾಯಾಲಯದ ಮುಂದೆ ಸಾಕ್ಷಿ ಹೇಳಿರುತ್ತೇನೆ. ನಾನು ನ್ಯಾಯಾಲಯದ ಮುಂದೆ ಮಂಚದ ಪಕ್ಕ ನನ್ನ ರಕ್ತ ಹತ್ತಿದ ತಲೆದಿಂಬು ಇತ್ತು ಎಂದು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ. ನಾನು ತಲೆದಿಂಬಿಗೆ ನನ್ನ ರಕ್ತ ಹತ್ತಿತ್ತು ಎಂದು ನ್ಯಾಯಾಲಯದ ಮುಂದೆ ಸಾಕ್ಷಿ ಹೇಳಿದ್ದರೂ ಸಹ ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

10. ಪೋಲಿಸರು ನನ್ನ ಸಮಕ್ಷಮ ಗ್ಯಾಸ ಸಿಲಿಂಡರನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಾನು ಪೋಲಿಸರಿಗೆ ಗ್ಯಾಸ ಸೀಲಿಂಡರ್ ನ್ನು ತೋರಿಸಿಲ್ಲ. ನಾನು ಪೋಲಿಸರಿಗೆ ಗ್ಯಾಸ ವಾಸನೆ ಮೃತ ನನ್ನ ತಾಯಿ ಮನೆಯಲ್ಲಿ ಬರುತ್ತಿತ್ತು ಎಂದು ಕರೆದುಕೊಂಡು ಹೋಗಿ ತೋರಿಸಿರುತ್ತೇನೆ. ಗ್ಯಾಸ ಪೈಪ್ ರೇಗುಲೇಟರ ಹತ್ತಿರ ಬಿಚ್ಚಿಕೊಂಡಿತ್ತು. ಸದರಿ ಪೈಪ್ ಪೂರ್ತಿ ತೆಗೆಯಲಾಗಿತ್ತು. ಆ ಸಮಯದಲ್ಲಿ ಗ್ಯಾಸ ಲೇಗುರೇಟರ್ ಆನ್ ಇತ್ತು. ನಾನು ಪೋಲಿಸರಿಗೆ ಕರೆದುಕೊಂಡು ಹೋಗಿ ತೋರಿಸಿದಾಗ ಸಿಲಿಂಡರ್ ನಿಂದ ಹೊರಗೆ ಬರುತ್ತಿತ್ತು. ನಾನು ನಮ್ಮ ಮೃತ ತಾಯಿ ಮನೆಗೆ ಹೋದಾಗ ಅಲ್ಲಿ ಲೈಟ್ ಸ್ವಿಚ್ ಗಳನ್ನು ಆನ್ ಮಾಡಿರಲಿಲ್ಲ.

11. ಪೋಲಿಸರು ನನ್ನ ಸಮಕ್ಷಮ ಸಿಲೆಂಡರ್ ಗೆ ಅಳವಡಿಸಲಾದ ಪೈಪನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಾನು ಸಹ ಅವರಿಗೆ ಸದರಿ ಪೈಪನ್ನು ಕೊಟ್ಟಿರುವುದಿಲ್ಲ. ಸಾಂಪ್ರದಾಯವನ್ನು ಅನುಸರಿಸುವ ಮನೆಗಳಲ್ಲಿ ಸಾಯಂಕಾಲ ಹೊಸ್ತಿಲಿಗೆ ದೀಪ ಹಚ್ಚುತ್ತಾರೆ ಎಂದರೆ ಸರಿ. ಹೊಸ್ತಿಲಿಗೆ ದೀಪ ಹಚ್ಚುವಾಗ ಹಿತ್ತಾಳೆಯ ಧೀಪ ಹಚ್ಚಿರುತ್ತಾರೆ ಎಂದರೆ ಸರಿ. ನಮ್ಮ ಮೃತ ತಾಯಿ ಸಂಪ್ರದಾಯಸ್ಥಳಿದ್ದರು ಎಂದರೆ ಸರಿ.

12. ಪೋಲಿಸರು ನನ್ನ ಮೃತ ತಾಯಿ ಮನೆಗೆ 10.30 - 11.00 ಗಂಟೆಯ ಸುಮಾರಿಗೆ ಬಂದಿರುತ್ತಾರೆ. ಆಗ 4 – 5 ಜನ ಪೋಲಿಸರು ಬಂದಿದ್ದರು. ನಂತರ ದೊಡ್ಡ ಸಾಹೇಬರು ಬಂದು ನಮ್ಮ ತಾಯಿ ಮೃತ ದೇಹವನ್ನು ಮರಣೊತ್ತರ ಪರೀಕ್ಷೆಗಾಗಿ ತೆಗೆದುಕೊಂಡು ಹೋದರು.

13. ನಾನು ಪಿಯುಸಿ ಪ್ರಥಮ ವರ್ಷದವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಪೋಲಿಸ ಇಲಾಖೆಯ ವಿವಿಧ ಹುದ್ದೆಗಳ ಮಾಹಿತಿ ಇದೆ. ಪೋಲಿಸರು ಬಂದಾಗ ನಾನು ನನ್ನ ಮೃತ ತಾಯಿ ಮನೆಯಲ್ಲಿ ಇರಲಿಲ್ಲ. ನನ್ನ ತಂಗಿಯನ್ನು ಕರೆಯಲು ಹೋಗಿದ್ದೆ. ನನ್ನ ತಂಗಿ ಪ್ರಾಸಾ-7 ಗೀತಾ ಇವಳನ್ನು ಕರೆಯಲು 10.30 ಗಂಟೆಗೆ ನಮ್ಮ ಮೃತ ತಾಯಿ ಮನೆಯಿಂದ , ನನ್ನ ಮನೆಗೆ ಹೋಗಿರುತ್ತೇನೆ.

14. ಆ ದಿನ ಪ್ರಾಸಾ-7 ಗೀತಾ ನೇರವಾಗಿ ತನ್ನ ಗಂಡನ ಮನೆಯಿಂದ ನನ್ನ ಮನೆಗೆ ಬಂದಿರುತ್ತಾಳೆ. ನಂತರ ನಾನು ಪ್ರಾಸಾ-7 ಗೀತಾ ಸೇರಿ ನನ್ನ ಮೃತ ತಾಯಿ ಮನೆಗೆ ಮದ್ಯಾಹ್ನ 1.30 ಗಂಟೆಗೆ ಬಂದೆವು. ನಾನು 10.30 ಗೆ ನಮ್ಮ ಮೃತ ತಾಯಿ ಮನೆಯಿಂದ ನಮ್ಮ ಮನೆಗೆ ಹೊರಟಾಗಿನಿಂದ ವಾಪಸ್ಸು 1.30 ಕ್ಕೆ ನಮ್ಮ ತಾಯಿ ಮನೆಗೆ ಬರುವವರೆಗೂ ಸದರಿ ಮನೆಯಲ್ಲಿ ಪೋಲಿಸರು ಏನೆಲ್ಲಾ ಮಾಡಿದರು ಎಂದು ನನಗೆ ಗೊತ್ತಿಲ್ಲ. ನಾನು 1.30 ಗೆ ನಮ್ಮ ಮೃತ ತಾಯಿ ಮನೆಗೆ ಹೋದಾಗ ಪೋಲಿಸರು ಅಲ್ಲಿಯೇ ಇದ್ದರು. ಆ ಸಮಯದಲ್ಲಿ ನನ್ನ ತಾಯಿ ಶವ ಮನೆಯಲ್ಲಿ ಇರಲಿಲ್ಲ, ಸರ್ಕಾರಿ ಆಸ್ಪತ್ರೆಗೆ ಪೋಲಿಸರು ತೆಗೆದುಕೊಂಡು ಹೋಗಿದ್ದರು. ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿರಲಿಲ್ಲ. ನನ್ನ ತಾಯಿ ಶವವನ್ನು ಮರಣೊತ್ತರ ಪರೀಕ್ಷೆಯ ನಂತರ ಯಾರು ಸ್ವೀಕರಿಸಿದರು ಎಂಬುದು ನನಗೆ ಗೊತ್ತಿಲ್ಲ.

15. ಅದೇ ದಿನ ರಾತ್ರಿ 9.00 ಗಂಟೆಗೆ ನನ್ನ ತಾಯಿ ಶವಸಂಸ್ಕಾರ ಮಾಡಿರುತ್ತೇವೆ. ನನ್ನ ತಂಗಿ ಘಟನೆಯ ಬಗ್ಗೆ ಆ ದಿನ ನನ್ನ ಜೊತೆ ಯಾವುದೇ ಮಾತು ಆಡಿಲ್ಲ. ಘಟನೆಯಾದ ಮೇಲೆ ನನ್ನ ತಂಗಿ ನನಗೆ ಘಟನೆಯ ಬಗ್ಗೆ ಇಲ್ಲಿಯವರೆಗೂ ಏನೂ ಹೇಳಿರುವುದಿಲ್ಲ, ಬರೀ ಕೊಲೆಯಾಗಿದೆ ಎಂದು ಮಾತ್ರ ಹೇಳಿರುತ್ತಾರೆ.

16. ನನ್ನ ಮೃತ ತಾಯಿ ಪ್ರತಿನಿತ್ಯ ಮಲಗುವಾಗ ಮನೆಯ ಬಾಗಿಲನ್ನು ಭದ್ರವಾಗಿ ಹಾಕಿಕೊಂಡು ಮಲಗುತ್ತಿದ್ದರು ಎಂದರೆ ಸರಿ. ನನ್ನ ದೊಡ್ಡ ಅಣ್ಣ ಪ್ರಾಸಾ-3 ಮದುಕೇಶ್ವರ ನನ್ನ ತಾಯಿ ಶವವನ್ನು ನೋಡಿರುತ್ತಾರೆ. ನನ್ನ ಮೃತ ತಾಯಿಯ ಮನೆಯ ಬಾಗಿಲು ಆ ದಿನ ಒಡೆದಿರುವುದು ಕಂಡು ಬಂದಿರುವುದಿಲ್ಲ. ಸದರಿ ಮನೆಗೆ ಒಂದೇ ಮುಖ್ಯ ಬಾಗಿಲು ಮಾತ್ರ ಇತ್ತು. ಸದರಿ ಮನೆಗೆ ಹಂಚನ್ನು ತೆಗೆದು ಯಾರೊ ಕೆಳಗೆ ಇಳಿದ ಬಗ್ಗೆ ಯಾವುದೇ ಕುರುಹು ಕಂಡು ಬಂದಿಲ್ಲ.

17. ಆರೋಪಿಯೇ ನನ್ನ ಮೃತ ತಾಯಿಯನ್ನು ಕೊಲೆ ಮಾಡಿರುತ್ತಾರೆಂದು ಪೋಲಿಸರು ಹೇಳಿದ ಮೇಲೆ ನನಗೆ ನಂಬಿಕೆ ಬಂದಿತು ಎಂದರೆ ಸರಿ. ನನ್ನ ಮೃತ ತಾಯಿ ಮನೆಯಿಂದ ಆರೋಪಿಯ ಮನೆ ಅರ್ದ ಕೀ.ಮಿ ಅಂತರದಲ್ಲಿದೆ. ನಾನು ಆ ದಿನ ಅಥವಾ ಯಾವತ್ತು ಆರೋಪಿಯ ಮನೆಗೆ ಹೋಗಿಲ್ಲ. ನಾನು ಪೋಲಿಸರ ಮುಂದೆ ಆರೋಪಿಯ ಮನೆಗೆ ಹೋಗಿ ನೋಡಿದಾಗ ಅವನು ಇರಲಿಲ್ಲ ಎಂದು ಹೇಳಿಕೆ ಕೊಟ್ಟಿರುತ್ತೇನೆ.

18. ನನ್ನ ತಾಯಿಯ ಶವವನ್ನು ಬೆಳಿಗ್ಗೆ 8.30 ಗೆ ನೋಡಿದಾಗ ಅವಳ ಎಡಕೆನ್ನೆಯ ಮೇಲೆ ಚೂರಿದ ಗಾಯ ಆಗಿದ್ದು ಅದರಿಂದ ರಕ್ತ ಬರುತ್ತಿತ್ತು. ಆ ಒಂದು ಗಾಯವನ್ನು ಬಿಟ್ಟರೆ ದೇಹದ ಬೇರೆ ಯಾವುದೇ ಭಾಗದಲ್ಲಿ ಗಾಯ ಆಗಿರುವುದಿಲ್ಲ. ನನ್ನ ಮೃತ ತಾಯಿ ಬೇರೆ ಸೀರೆಯನ್ನು ಅವಳ ಕುತ್ತಿಗೆಗೆ ಬಲವಾಗಿ ಬಿಗಿಯಲಾಗಿತ್ತು. ಸದರಿ ಸೀರೆಯನ್ನು ನಾನು ಪೋಲಿಸರಿಗೆ ಕೊಟ್ಟಿರುವುದಿಲ್ಲ. ಅವರೇ ಪಂಚನಾಮೆ ಮಾಡುವಾಗ ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆ ಜರುಗಿಸುವಾಗ ನಾನು ಅಲ್ಲಿ ಇರಲಿಲ್ಲ. ನನ್ನ ಮೃತ ತಾಯಿ ಆ ದಿನ ಉಟ್ಟ ಸೀರೆ ನೇರಳೆ ಹಾಗೂ ಗುಲಾಬಿ ಮಿಶ್ರಿತ ಬಣ್ಣದ್ದಾಗಿದ್ದು, ಅವಳ ಕುತ್ತಿಗೆಗೆ ಬಿಗಿದ ಸೀರೆ ಬಿಳಿ ಬಣ್ಣದ್ದಾಗಿದ್ದು ಅದರಲ್ಲಿ ಹೂವಿನ ಡಿಸೈನ್ ಇತ್ತು.

19. ಆ ದಿನ ಗ್ಯಾಸ್ ಹೊರಗೆ ಬರುತ್ತಿತ್ತು ಹಾಗೂ ಹೊಸ್ತಿಲಿಗೆ ಹಚ್ಚಿದ ದೀಪ ಆರಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಕ್ಕ ನನಗೆ ಆರೋಪಿ ಮತ್ತು ಅವನ ಹೆಂಡತಿ ಘಟನೆಯ ಒಂದು ವಾರದ ಹಿಂದೆ ಯಾರೊ ಒಬ್ಬ ಮಹಿಳೆಯನ್ನು ಕಚೇರಿಗೆ ಮನೆ ಬಾಡಿಗೆ ಬೇಕು ಎಂದು ಕರೆದುಕೊಂಡು ಬಂದಿದ್ದರು ಎಂದು ನನಗೆ ತಿಳಿಸಿದಳು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20. ನನ್ನ ತಾಯಿ ಸಾವನ್ನೊಪ್ಪಿದ ನಂತರ ಆರೋಪಿ ಅವನ ಮೂರು ಹೆಣ್ಣು ಮಕ್ಕಳನ್ನು ಕರೆದುಕೊಂಡು ನಮ್ಮ ಮನೆಗೆ ಮಾತನಾಡಿಸಲು ಬಂದಿದ್ದ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಆರೋಪಿಯನ್ನು ಸಿಲುಕಿಸುವ ಉದ್ದೇಶದಿಂದ , ನಾವು ಆರೋಪಿಯ ಮನೆಗೆ ಹೋದಾಗ ಅವನ ಮನೆ ಕೀಲಿ ಹಾಕಿತ್ತು ಎಂದು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳಿರುತ್ತೇನೆ ಎಂದರೆ ಸರಿಯಲ್ಲ.

21. ಆರೋಪಿ ಅವನ ಹೆಂಡತಿ ನನ್ನ ತಾಯಿಯ ಎರಡು ಕೈಗಳನ್ನು ಮಂಚಕ್ಕೆ ಕಟ್ಟಿ , ಕುತ್ತಿಗೆಗೆ ಮತ್ತು ಕಣ್ಣಿಗೆ ಸೀರೆ ಕಟ್ಟಿ , ತಲೆದಿಂಬನ್ನು ನನ್ನ ತಾಯಿಯ ಮುಖಕ್ಕೆ ಒತ್ತಿ ಹಿಡಿದು ಸಾಯಿಸಿದರು ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

22. ಆರೋಪಿ ತನ್ನ ಮೂರು ಜನ ಹೆಣ್ಣು ಮಕ್ಕಳನ್ನು ಹುಬ್ಬಳ್ಳಿಗೆ ಕಳುಹಿಸಿ , ನಂತರ ತಾನು ಮತ್ತು ತನ್ನ ಹೆಂಡತಿ ಹುಬ್ಬಳ್ಳಿಯ ಉಣಕಲ್ ಕೆರೆಗೆ ಹೋಗಿ ವಿಷ ತೆಗೆದುಕೊಂಡರು ಎಂದು ನಾನು ಪೋಲಿಸರ ಮಾತಿನಂತೆ ಹೇಳಿರುತ್ತೇನೆ ಎಂದರೆ ಸರಿ. ಸದರಿಯವರು ವಿಷ ತೆಗೆದುಕೊಳ್ಳುವ ಮುಂಚೆ ತಮ್ಮ ಮೂರು ಜನ ಹೆಣ್ಣುಮಕ್ಕಳಿಗೆ ಅವರು ನಮ್ಮ ತಾಯಿಯನ್ನು ಕೊಲೆ ಮಾಡಿ, ಅವಳ ಬಂಗಾರನ್ನು ತಗೆದುಕೊಂಡು ಮನೆಯಲ್ಲಿ ಇಟ್ಟಿರುತ್ತೇವೆ ಎಂದು ಹೇಳಿದ ವಿಷಯವನ್ನು ಪೋಲಿಸರಿಗೆ ಹೇಳಿರುತ್ತೇನೆಂದರೆ ಸರಿ.

23. ಆರೋಪಿಯ ಹೆಂಡತಿ ಸುಧಾಳಿಗೆ ವಿಪರೀತ ಹೊಟ್ಟೆನೊವು ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ಆರೋಪಿಯ ಹೆಂಡತಿ ಅವರ ಮನೆಯಲ್ಲಿ ವಿಷ ತೆಗೆದುಕೊಂಡಿದ್ದು ಅದನ್ನು ನೋಡಿ ಆರೋಪಿತನು ಗಾಭರಿಯಾಗಿ ವಿಷ ತೆಗೆದುಕೊಂಡಿರುತ್ತಾನೆಂದರೆ ಗೊತ್ತಿಲ್ಲ. ಆರೋಪಿ ಮತ್ತು ಅವನ ಹೆಂಡತಿ ವಿಷ ತೆಗೆದುಕೊಂಡ ಕಾರಣದಿಂದ ಅವರ ಮೂರು ಜನ ಹೆಣ್ಣು ಮಕ್ಕಳು ಹುಬ್ಬಳ್ಳಿಯ ಕೀಮ್ಸ್ ಆಸ್ಪತ್ರೆಗೆ ದಾಖಲಿಸಿದರು ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲ ವಿಷಯಗಳು ನನಗೆ ಗೊತ್ತಿದ್ದರೂ ಸಹ ನ್ಯಾಯಾಲಯದ ಮುಂದೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ನಾನು , ನನ್ನ ಸಹೋದರರು ನಮ್ಮ ಮೃತ ತಾಯಿ ಜೊತೆ ಬಂಗಾರ ಹಾಗೂ ಮನೆಯ ವಿಷಯವಾಗಿ ಜಗಳವಾಗಿದ್ದು ಅದು ವಿಕೋಪಕ್ಕೆ ಹೋಗಿ, ಆ ಸಮಯದಲ್ಲಿ ಈ ಅಹಿತಕರ ಘಟನೆ ನಡೆದಿದ್ದು , ಅದನ್ನು ಮುಚ್ಚಿಕೊಳ್ಳುವ ಉದ್ದೇಶದಿಂದ ನಮ್ಮ ಸೋದರ ಮಾವ ಪ್ರಾಸಾ-1 ಇವರ ಮೂಲಕ ಯಾರೊ ಕೊಲೆ ಮಾಡಿದ್ದಾರೆ ಎಂದು ಸುಳ್ಳು ದೂರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ನಿಮ್ಮ ತಾಯಿಗೆ ಆಸ್ತಿ ವಿಷಯವಾಗಿ ತೊಂದರೆ ಕೊಡಬೇಡಿ ಎಂದು ಬುದ್ಧಿವಾದ ಹೇಳಿದ ಕಾರಣದಿಂದ ಸಿಟ್ಟಾಗಿ ಈ ಪ್ರಕರಣದಲ್ಲಿ ಪೋಲಿಸರೊಂದಿಗೆ ಶಾಮಿಲಾಗಿ ಆರೋಪಿಯನ್ನು ಸಿಕ್ಕಾಕಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಹಾಗೂ ನಮ್ಮ ತಾಯಿ ಕೊಲೆಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

(ಅಶ್ವಿನಿ ವಿಜಯ ಶಿರಿಯಣ್ಣನವರ)

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.